ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನರಸಿಂಹಾಯ ನಮಃ

ಶ್ರೀಮಧ್ವರಾಜಗುರುಭ್ಯೋ ನಮಃ

ಶ್ರೀವಾದಿರಾಜಗುರುಭ್ಯೋ ನಮಃ

ಶ್ರೀವಿಜಯದಾಸಗುರುಭ್ಯೋ ನಮಃ

# ಶ್ರೀನರಸಿಂಹದೇವರ ದೇವರನಾಮಗಳು

-1-

ರಾಗ ಕಾಂಬೋಧಿ- ಅಟ ತಾಳ

ಏನು ಕಾರಣ ಬಾಯಿ ತೆರದಿ –ಪೇಳಲೋ

ದಾನವಾಂತಕ ಅಹೋಬಲ ನಾರಸಿಂಹನೇ || ಪ ||

ನಿಗಮ ಚೋರನ ಕೊಲಲು ತೆರೆದೆಯೋ ಈ ಬಾಯ

ನಗವ ಬೆನ್ನಲಿ ಹೊತ್ತು ನಡುಗಿ ತೆರೆದೆಯೋ ಬಾಯ- ಭೂ

ಮಿಗಳ್ಳನ ಕೊಂದು ಬಳಲಿ ತೆರೆದೆಯೋ ಬಾಯ

ಜಗವರಿಯೆ ಪೇರುರವಿರಿದ ಪ್ರಹ್ಲಾದ ವರದ

ಅಹೋಬಲ ನಾರಸಿಂಹನೇ || 1 ||

ಬಲಿಯ ದಾನವ ಬೇಡಲೆಂದು ತೆರೆದೆಯೋ ಬಾಯ

ಛಲದಿಂದ ಕ್ಷತ್ರಿಯರ ಕೊಲಲು ತೆರೆದೆಯೋ ಬಾಯ

ಕುಲಸತಿ ಅರಸಿ ಕಾಣದೆ ತೆರೆದೆಯೋ ಬಾಯ

ಮಲೆತು ಮಾವನ ಕೊಂದು ನಿಂದೆ- ಇಂಥ

ಇಳಿಯಬಾರದ ಭೂಮಿಗಿಳಿದ ನರಸಿಂಹ ॥ 2 ॥

ನಾರಿಯರ ಚೆಲ್ವಿಕೆಯ ನೋಡಿ ತೆರೆದೆಯೊ ಬಾಯ

ಏರಿ ಅಶ್ವವ ಮೆಟ್ಟಿ ಆಳಲಿ ತೆರೆದೆಯೊ ಬಾಯ

ಮಾರಪಿತ ಕಾಗಿನೆಲೆಯಾದಿಕೇಶವ ರಂಗ

ಧೀರ ಶ್ರೀನಾಥ ಭವನಾಶ ಪೇಳೋ ಪೇಳು

ಏತಕೆ ಅಹೋಬಲ ನರಸಿಂಹನೆ ? ॥ 3 ॥

-೭-

ರಾಗ- ಶಂಕರಾಭರಣ(ದುರ್ಗಾ) ತಾಳ- ಅಟತಾಳ

ನರಸಿಂಹ ಪಾಹಿ ಲಕ್ಷ್ಮೀ ನರಸಿಂಹ ॥ ಪ ॥

ನರಸಿಂಹ ನಮಿಪೆ ನಾ ನಿನ್ನ, ಚಾರು ।

ಚರಣ ಕಮಲಕೆ ನೀನೆನ್ನ, ಅಹಾ ।

ಕರವ ಪಿಡಿದು ನಿಜ ಶರಣನೆಂದೆನಿಸು ಭಾ-

ಸುರ ಕರುಣಾಂಬುಧೆ ಗರುಡವಾಹನ ಲಕ್ಷ್ಮೀ ॥ ಅ. ಪ. ॥

ತರಳ ಪ್ರಹ್ಲಾದನ ನುಡಿಯ ಕೇಳಿ । ತ್ವರಿತದಿ ಬಂದೆ

ಎನ್ನೊಡೆಯ । ಏನು

ಕರುಣಾಳೊ ಭಕ್ತರ ಭಿಡೆಯ ಮೀರ । ಲರಿಯೆನೆಂದು

ಕೆಂಗಿಡಿಯ ಆಹಾ ।

ಭರದಿಂದುಗುಳುತ ಬೊಬ್ಬಿರಿದು ಬೆಂಬೊತ್ತಿ ಕ-

ರ್ಬುರ ಕಶಿಪುವಿನ ಮುಂಗುರುಳು ಪಿಡಿದೆ ಲಕ್ಷ್ಮೀ ॥ 1 ॥

ಪ್ರಳಯಾಂಬುನಿಧಿ ಘನ ಘೋಷದಂತೆ। ಘುಳಿ

ಘುಳಿಸುತಲಿ ಪ್ರದೋಷ ಕಾಲ

ತಿಳಿದು ದೈತ್ಯನ ಅತಿರೋಷದಿಂದ। ಪ್ಪಳಿಸಿ ಮೇದಿನಿಗೆ

ನಿರ್ದೋಷ ಆಹಾ।

ಸೆಳೆಸೆಳೆಯುತ ಚರ್ಮಸುಲಿದು ಕೆನ್ನೆತ್ತರೋ-

ಕುಳಿಯನಾಡಿಗೆ ದಿಶಾವಳಿಗಳೊಳಗೆ ಲಕ್ಷ್ಮೀ ॥ 2 ॥

ಕ್ರೂರ ದೈತ್ಯನ ತೋರ ಕರುಳ, ತೆಗೆ।ದ್ವಾರ ಮಾಡಿದೆ

ನಿಜ ಕೊರಳ ಕಂಡು।

ವಾರಿಜಾಸನ ಮುಖ್ಯರರಳ ಪುಷ್ಪ ಧಾರೆಗರೆದರ್ವೇಗ ತರಳ, ಆಹಾ।

ಧೀರ ಪ್ರಹ್ಲಾದಗೆ ತೋರಿ ತ್ವದಂಘ್ರಿ ಸ-

ರೋರುಹವನು ಕಾಯ್ದೆ ಕಾರುಣ್ಯನಿಧಿ ಲಕ್ಷ್ಮೀ ॥ 3 ॥

ಜಯ ಜಯ ದೇವವರೇಣ್ಯ ಮಹ। ದ್ಭಯನಿವಾರಣ ಅಗ್ರಗಣ್ಯ ಗುಣ।

ತ್ರಯದೂರ ದುರಿತಾರಣ್ಯ ಧನಂ। ಜಯ ಜಗದೇಕ ಶರಣ್ಯ ಆಹಾ।

ಲಯವಿವರ್ಜಿತ ಲೋಕತ್ರಯ ವ್ಯಾಪ್ತ ನಿಜಭಕ್ತ

ಪ್ರಿಯ ಘೋರ ಭಯಹರ ದಯಮಾಡೆನ್ನನು ಲಕ್ಷ್ಮೀ ॥ 4 ॥

ಕುಟಿಲ ದ್ವೇಷದವ ನೀನಲ್ಲ ನಿನ್ನಾ। ಭ್ರಟಕಂಜಿದರು

ಸುರರೆಲ್ಲ ನರ।

ನಟನೆ ತೋರಿದೆ ಲಕ್ಷ್ಮೀನಲ್ಲ ಇದು। ಸಟೆಯಲ್ಲ

ಅಪ್ರತಿಮಲ್ಲ ಆಹಾ ।

ವಟಪತ್ರಶಯನ ಧೂರ್ಜಟಿವಂದ್ಯ ಜಗನ್ನಾಥ

ವಿಠಲ ಕೃತಾಂಜಲಿ ಪುಟದಿ ಬೇಡುವೆ ಲಕ್ಷ್ಮೀ ॥ 5 ॥

-3-

ರಾಗ- ಶಂಕರಾಭರಣ (ಭೀಮಪಲಾಸ) ತಾಳ - ಅಟತಾಳ (ತೀನ್ ತಾಲ)

ಪಾಲಿಸೊ ನರಸಿಂಹ ಪಾಲಿಸೊ ॥ ಪ ॥

ಪಾಲಿಸೋ ಪರಮಪಾವನ ಕಮ-

ಲಾಲಯ ನಂಬಿದೆ ನಿನ್ನ ಆಹಾ

ಬಾಲೇಂದುಕೋಟಿಯ ಸೋಲಿಪ ನಖತೇಜ

ಮೂಲೋಕದರಸನೆ ಪಾಲಿಸು ಬಿಡದಲೆ ॥ ಅ. ಪ ॥

ಹಿಂದೆ ಪ್ರಹ್ಲಾದನ ಮೊರೆಯ ಕೇಳಿ

ಬಂದು ಕಾಯ್ದೆಯೊ ಭಕ್ತಪ್ರಿಯಸಖ

ಸಂದೋಹ ಮೂರುತಿ ಆಯತಾಕ್ಷ

ಎಂದೆಂದು ಬಿಡದಿರು ಕೈಯ ಆಹಾ

ವೃಂದಾರಕೇಂದ್ರರ ಬಂದ ದುರಿತಗಳ

ಹಿಂದೆ ಮಾಡಿ ಕಾಯ್ದ ಇಂದಿರಾರಮಣನೆ ॥ 1 ॥

ಹರಣದಲ್ಲಿ ನಿನ್ನ ರೂಪ ತೋರಿ

ಪರಿಹರಿಸೊ ಎನ್ನ ತಾಪ ದೂರ

ಇರದಿರೊ ಹರಿ ಸಪ್ತದ್ವೀಪಾಧಿಪ

ಸಿರಿಪತಿ ಭಕ್ತಸಲ್ಲಾಪ ಆಹಾ

ಕರಣಶುದ್ಧನ ಮಾಡಿ ಕರೆಯೊ ನಿನ್ನ ಬಳಿಗೆ

ನರಕಂಠೀರವ ನಿನ್ನ ಚರಣ ಆಶ್ರಯಿಸಿದೆ II 2 II

ಶರಣ ಪಾಲಕನೆಂಬೊ ಬಿರುದು ಕೇಳಿ

ತ್ವರಿತದಿ ಬಂದೆನೊ ಅರಿದು ಇನ್ನು

ಪರಿಪರಿ ಅಪರಾಧ ಮರೆದು । ಪರ

ತರನೆ ನೋಡೆನ್ನ ಕಣ್ ತೆರೆದು ಆಹಾ

ಮರಣ ಜನನಗಳ ತರಿದು ಬಿಸುಟು ನಿನ್ನ

ಶರಣರ ಸಂಗದಲ್ಲಿರಿಸಿ ಉದ್ಧರಿಸೆನ್ನ II 3 II

ಸಂಸಾರ ಸಾಗರದೊಳಗೆ ಎನ್ನ

ಹಿಂಸೆಗೊಳಿಸುವರೆ ಹೀಗೆ ಎಲೊ

ಕಂಸಾರಿ ಬಾಗೆ ಅನ್ಯರಿಗೆ ಮತ್ತೆ

ಸಂಶಯವಿಲ್ಲೀ ಮಾತಿಗೆ ಆಹಾ

ಹಂಸಡಿಬಿಕರನ್ನು ಧ್ವಂಸಮಾಡಿದ ಶೌರಿ

ಶಿಂಶುಮಾರಮೂರ್ತಿ ದಿವಸ ದಿವಸದಲ್ಲಿ II 4 II

ಸಿರಿಬೊಮ್ಮ ಭವ ಶಕ್ರಸುರ ಕೈಯ
ನಿರುತ ಸ್ತುತಿಸಿಕೊಂಬ ಧೀರ ಶುಭ
ಪರಿಪೂರ್ಣ ಗುಣ ಪಾರಾವಾರ ಪೂರ-
ವರ ಕಾಣೆನಂತ ಸುಂದರ ಆಹಾ
ಸ್ಮರನ ಕಾಂತಿಯ ನಿರಾಕರಿಸುವ ತೇಜನೆ
ಎರವು ಮಾಡದೆ ಹೃತ್ಸರಸಿಜದೊಳು ತೋರಿ || 5 ||

ಮೊದಲು ಮತ್ಸ್ಯಾವತಾರದಿ ವೇದ
ವಿಧಿಗೆ ತಂದಿತ್ತೆ ವಿನೋದಿ ಆ ಶ-
ರಧಿಯೊಳು ಸುರರಿಗೋಸ್ಕರದಿ ನೀನು
ಸುಧೆಯ ಸಾಧಿಸಿ ಉಣಿಸಿದಿ ಆಹಾ
ಅದ್ಭುತ ಭೂಮಿಯ ತೆಗೆದೊಯ್ದನ ಕೊಂದು
ಮುದದಿ ಹಿರಣ್ಯಕನುದರ ಬಗೆದ ಧೀರ || 6 ||

ಬಲಿಯ ಮನೆಗೆ ಪೋಗಿ ದಾನ ಬೇಡಿ
ತುಳಿದೆ ಪಾತಾಳಕ್ಕೆ ಅವನ ಪೆತ್ತ-
ವಳ ಶಿರತರಿದ ಪ್ರವೀಣ ನಿನ್ನ
ಛಲಕೆಣೆಗಾಣೆ ರಾವಣನ ಆಹಾ
ತಲೆಯನಿಳುಹಿ ಯದುಕುಲದಿ ಜನಿಸಿ ಮತ್ತೆ
ಲಲನೇರ ಪತಿವ್ರತವಳಿದ ಅಶ್ವಾರೂಢ || 7 ||

ಮಾನಸಪೂಜೆಯ ದಯದಿ ಇತ್ತು

ಶ್ರೀನಾಥ ಕಳೆ ಭವವ್ಯಾಧಿ ಕಾಯೊ

ಅನಾಥ ಬಂಧು ಸುಮೋದಿ ಚತು

ರಾನನಪಿತ ಕೃಪಾಂಬೋಧಿ ಆಹಾ

ನಾನೊಬ್ಬರನರಿಯೆ ಗಾನವಿನೋದಿಯೆ

ಏನೇನು ಮಾಡುವ ಸಾಧನ ನಿನ್ನದು || 8 ||

ನಿನ್ನ ಸಂಕಲ್ಪವಲ್ಲದೆ ಇನ್ನು

ಅನ್ಯಥಾ ಆಗಬಲ್ಲುದೆ ಇದು

ಚೆನ್ನಾಗಿ ನಾ ತಿಳಿಯದೆ ಮಂದ

ಮಾನವನಾಗಿ ಬಾಳಿದೆ ಆಹಾ

ಎನ್ನಪರಾಧವ ಇನ್ನು ನೀ ನೋಡದೆ

ಮನ್ನಿಸು ದಯದಿ ಜಗನ್ನಾಥವಿಠಲ || 9 ||

-4-

ತಾಳ- ಮುಖಾರಿ (ಮಾಲಕಂಸ) ತಾಳ ಆದಿತಾಳ (ತೀನ್ ತಾಳ)

ಕಾಯೋ ಶ್ರೀನಾರಸಿಂಹ ಕಾಯೋ ಜಯನಾರಸಿಂಹ || ಪ ||

ಕಾಯೋ ಶ್ರೀನಾರಸಿಂಹ ತ್ರಯಂಬಕಾದ್ಯಮರೇಶ

ಭಯಾಂಧತಿಮಿರ ಮಾರ್ತಾಂಡ ಶ್ರೀನಾರಸಿಂಹ || ಅ. ಪ ||

ಘೋರ ಅಕಾಲಮೃತ್ಯು ಮೀರಿಬರಲು ಕಂಡು

ಧೀರ ನೀ ಬಿಡಿಸದಿನ್ನಾರೋ ಶ್ರೀನಾರಸಿಂಹ || 1 ||

ಭೀಷಣನ ಸುಭದ್ರ ದೋಷ ಮೃತ್ಯುಗೆ ಮೃತ್ಯು

ಸುಷುಮ್ನಾ ನಾಡಿಸ್ಥಿತ ವಿಭುವೇ ಶ್ರೀನಾರಸಿಂಹ || 2 ||

ಜ್ಞಾನರಹಿತನಾಗಿ ನಾ ನಿನ್ನ ಮರೆತರೆ

ನೀಮರೆತದ್ದೇಕೋ ಪೇಳೋ ಶ್ರೀನಾರಸಿಂಹ || 3 ||

ಪ್ರಬಲೋತ್ತಮನೆನಿಸಿ ಅಬಲರ ಕಾಯದಿರೆ

ಸುಬಲರು ಕಂಡು ಮೆಚ್ಚುವರೆ ಶ್ರೀನಾರಸಿಂಹ || 4 ||

ಪಾಲಮುನ್ನೀರಾಗಾರ ಪದುಮ ಮನೋಹರ **ಗೋ-**

**ಪಾಲವಿಠಲ** ಜಗತ್ಪಾಲ ಶ್ರೀನಾರಸಿಂಹ || 5 ||

-5-

ರಾಗ- ದರ್ಬಾರ ಅಟತಾಳ

**ಇದು ಏನಂಗ ಮೋಹನಾಂಗ** **|| ಪ ||**

ಮದನ ಜನಕ ತೊರವೆಯ ನರಸಿಂಹ || ಅ. ಪ. ||

ಸುರರು ಸ್ತುತಿಸಿ ಕರೆಯೆ ತುಟಿಯ ಮಿಸುಕದವ।

ಬರಿದೆ ಏತಕೆ ಬಾಯಿ ತೆರೆದೆ ಹೇಳೊಮ್ಮೆ || 1 ||

ವರಶೀಲ ಮುತ್ತು ಮಾಣಿಕ ಹಾರಗಳಿರೆ।

ಕೊರಳಲ್ಲಿ ಕರಳು ಮಾಲೆಯ ಹಾಕಿ ಮೆರೆವುದು ॥ 2 ॥

ತೊರವೆಯ ನರಹರಿ ಪುರಂದರ ವಿಠಲ ।

ಸಿರಿಯಪ್ಪ ತೊಡೆಯೊಳ್ ಅರಿಯನಿಟ್ಟಿರುವುದು ॥ 3 ॥